ಶ್ರೀ ಕೆ. ಸೋಮಪ್ಪ ಸುವರ್ಣ : ಸ್ವಾಮಿ, ತಾವು ತಮ್ಮ ಉತ್ತರದಲ್ಲಿ ಮುಲ್ಕಿಗೆ ಕೆ.ಎಸ್.ಆರ್.ಟಿ.ಸಿ. ಸೂಪರ್ ಡೀಲಕ್ಸ್ ಬಸ್ ಇಲ್ಲದೆ ತೊಂದರೆಯಾಗಿದೆ ಎನ್ನುವುದನ್ನು ಒಪ್ಪಿದ್ದೀರಿ. ಆದರೆ, ಇದರ ವ್ಯವಸ್ಥೆ ಮಾಡುವುದಕ್ಕೆ ಸಧ್ಯ ಅವಶ್ಯಕತೆ ಇರುವುದಿಲ್ಲವೆಂದೂ ಹೇಳಿದ್ದೀರಿ. ಮುಲ್ಕಿ ಉಡುಪಿ ಮತ್ತು ಮಂಗಳೂರು ನಡುವಿನ ಕೇಂದ್ರಸ್ಥಳ. ಮಂಗಳೂರಿನಿಂದ ಮುಲ್ಕಿ 30ಕಿಲೋಮೀಟರ್ ಉಂಟು, ಉಡುಪಿಯಿಂದ 30 ಕಿಲೋಮೀಟರ್ ಉಂಟು. ಮಧ್ಯದಲ್ಲಿ ಒಂದು ಸ್ಟೇಜ್ ಅಗತ್ಯವಾಗಿರುವುದರಿಂದ ಅಲ್ಲಿ ಸೂಪರ್ ಡೀಲಕ್ಸ್ ಬಸ್ ಅಗತ್ಯವಾಗಿ ಬೇಕಾಗಿದೆ ಎಂದು ಕೇಳುತ್ತಿದ್ದೇನೆ. ಹಿಂದೆ ಮುಲ್ಕಿಯಿಂದಲೇ ಹೋಗುವಂಥ ಸೆಮಿ ಲಕ್ಸುರಿ ಬಸ್ ಇತ್ತು ಮತ್ತು ಕಟೀಲ್‌ನಿಂದ ಹೋಗುವಂಥ ಸೆಮಿ ಲಕ್ಸುರಿ ಬಸ್ ಸಹ ಇತ್ತು. ಈ ಎರಡು ಬಸ್ಸುಗಳೂ ಈಗ ನಿಂತಿವೆ ಇದರ ಬದಲಿಗೆ ಸೂಪರ್ ಡೀಲಕ್ಸ್ ಬಸ್ಸನ್ನು ಮುಲ್ಕಿಯಿಂದ ಕೊಟ್ಟರೆ ಅನುಕೂಲವಾಗುತ್ತದೆ ಒಂದು ವೇಳೆ ಜನ ಕಡಿಮೆಯಾದರೆ, ಮಂಗಳೂರಿನಲ್ಲಿ ಉಳಿದ ಸೀಟುಗಳನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಿದೆ. ಈ ಬಗ್ಗೆ ಕೆಲವು ಸಾರ್ವಜನಿಕರ ಮನವಿಯನ್ನೂ ತಮಗೆ ಸಲ್ಲಿಸಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ಒಂದು ನಿರ್ಧಾರವನ್ನು ನಮಗೆ ತಿಳಿಸಬೇಕು. ಇದು ಬಹಳ ಅವಶ್ಯಕವಾಗಿರುವುದು. ಇದೊಂದು ಚಾರಿತ್ರಿಕವಾದ ಸ್ಥಳ. ತಾವು ನಿರ್ಧಾರವನ್ನು ಪ್ರಕಟಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಮಾನ್ಯ ಸದಸ್ಯರ ಮನವಿ ಮೇಲೆ ಅಲ್ಲಿ ಸ್ಟಾಪ್ ಸ್ಟಾಪಿಸಲಾಗಿ ಪ್ರತಿಯೊಂದು ಬಸ್ ಬೆಂಗಳೂರಿಗೆ ಹೋಗುವುದು ಮತ್ತು ಬಾಂಬೆಗೆ ಹೋಗುವುದು ಅಂದರೆ Kundapur-Bangalore Super Deluxe Service leaving Kundapur at 7.00 P.M. Coondapur-Bangalore Express bus service leaving Kundapur at 8.00 a.m. At present there is no exclusive service from Mulki to Bangalore.

ಶ್ರೀ ಕೆ. ಸೋಮಪ್ಪ ಸುವರ್ಣ : ಸೆಮಿ ಲಕ್ಸುರಿ ಬಸ್ ಮಾತ್ರ ನಿಲ್ಲುತ್ತದೆ. ಸೂಪರ್ ಡೀಲಕ್ಸ್ ಬಸ್‌ನ್ನು ನಿಲ್ಲಿಸುವುದಿಲ್ಲ. ದೂರ ಪ್ರಯಾಣಕ್ಕೆ ಸೂಪರ್ ಡೀಲಕ್ಸ್ ಬಸ್ ಮುಲ್ಕಿಯಿಂದ ಬೆಂಗಳೂರಿಗೆ ವ್ಯವಸ್ಥೆ ಮಾಡಬೇಕು. ಜನ ಒಂದು ವೇಳೆ ಕಡಿಮೆಯಾದರೆ ಮಂಗಳೂರಿನಲ್ಲಿ ಭರ್ತಿ ಮಾಡಿಕೊಳ್ಳಬಹುದು. ಹಿಂದೆ ಈ ಸವಲತ್ತು ಇತ್ತು. ಸೆಮಿ ಲಕ್ಸುರಿ ಬಸ್ ಇತ್ತು. ನಮಗೆ ಡೀಲಕ್ಸ್ ಬಸ್ ಬೇಕೆಂದು ಕೇಳಿದ್ದೇವೆ. ಆದುದರಿಂದ ಇದನ್ನು ಮತ್ತೊಮ್ಮೆ ಪರಿಶೀಲಿಸಿ, ಮುಂದೆ ಮೂಲ್ಕಿಯಿಂದ ಸೂಪರ್ ಡೀಲಕ್ಸ್ ಬಸ್ ಹೊರಡುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ : ಸೂಪರ್ ಬಸ್ ಹೋಗುತ್ತಾ ಇದೆ, ಅಲ್ಲಿ ಸ್ಟಾಪ್ ಕೂಡ ಇದೆ, ಆ ಪ್ರಾವಿಷನ್ ಕೂಡ ಅಲ್ಲಿ ಮಾಡಿದ್ದೇವೆ. ಇದರ ಬಗ್ಗೆ ಸೆಕ್ರೆಟರಿಯವರಿಗೂ ತಿಳಿಸಿದ್ದೇನೆ.

ಬೆಂಗಳೂರು ನಗರದಲ್ಲಿ ಕೆಲವೊಂದು ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

178 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕೆಲವೊಂದು ಮಾರ್ಗಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಆದರ ವಿವರಗಳನ್ನು ಪೂರೈಸಿ?

ಇ) ಇಲ್ಲದಿದ್ದಲ್ಲಿ ಪ್ರಯಾಣಿಕರಿಗೆ ಉತ್ತಮ ಸೇವೆ ಸಲ್ಲಿಸುವ ಸಲುವಾಗಿ ಸರ್ಕಾರ ಕೈಗೊಂಡ ಕ್ರಮಗಳು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ನಗರ ಸಾರಿಗೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಗರದಲ್ಲಿ ಬಿ.ಟಿ.ಎಸ್. ಕೆಲವು ರೋಡುಗಳನ್ನು ಖಾಸಗೀಕರಣ ಮಾಡುತ್ತೀರಾ ಎಂದು ಕೇಳಿದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಖಾಸಗೀಕರಣ ಮಾಡುತ್ತಾರೋ ಅಥವಾ ಅವರೇ ಓಡಿಸುತ್ತಾರೋ ಅದು ಸರ್ಕಾರಕ್ಕೆ ಬಿಟ್ಟಿದ್ದು. ಆದರೆ ಬೆಂಗಳೂರು ನಗರದ ನಾಗರೀಕರಿಗೆ ಬಸ್ ವ್ಯವಸ್ಥೆ ಮಾಡಿಕೊಡುವುದು ಸರ್ಕಾರದ್ದು. ಈಗಿರತಕ್ಕ ವ್ಯವಸ್ಥೆಯಲ್ಲಿ ಕಚೇರಿ ವೇಳೆಯಲ್ಲಿ ಮತ್ತು ಶಾಲಾ ವೇಳೆಯಲ್ಲಿ ಬಸ್ಸಿನ ಫುಟ್‌ಬೋರ್ಡಿನ ಮೇಲೂ ನಿಲ್ಲುವುದಕ್ಕೆ ಅವಕಾಶ ಇಲ್ಲ. ಇದು ನಗರದ ಮಧ್ಯದಲ್ಲಿ ಹೊರಗಡೆ, ಅಂದರೆ, ಜೆ.ಪಿ.ನಗರ ಮುಂತಾದ ಕಡೆಗಳಲ್ಲಿ 1 ಕಿಲೋಮೀಟರ್, 2 ಕಿಲೋಮೀಟರ್ ಬಸ್‌ಸ್ಟಾಪಿಗೆ ನಡೆದುಕೊಂಡು ಬಂದು ಬಸ್ ಹತ್ತತಕ್ಕಂಥ ಪರಿಸ್ಥಿತಿ ಇದೆ. ಬಿ.ಟಿ.ಎಸ್. ಮೂಲಕ ಒಳ್ಳೆಯ ಸೌಲಭ್ಯ ಕೊಡಿ, ಇಲ್ಲದೇ ಖಾಸಗೀಕರಣ ಮಾಡಿ. ಆದರೆ ಖಾಸಗೀಕರಣ ಮಾಡುವುದಿಲ್ಲವೆಂದು ಹೇಳಿದ್ದಾರೆ. ವಿಮಾನ ಸೌಲಭ್ಯವನ್ನು ಖಾಸಗೀಯವರಿಗೆ ಕೊಟ್ಟಿದ್ದಾರೆ. ತಾವು ಏಕೆ ಖಾಸಗೀಕರಣ ಮಾಡಬಾರದು, ಇದರಿಂದ ಜನರಿಗೆ ಅನುಕೂಲವಾಗುವುದಿಲ್ಲವೇ?

ಶ್ರೀ ಭೀಮಣ್ಣ ಖಂಡ್ರೆ : ಖಾಸಗೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ತಾವು ಸೌಲಭ್ಯಗಳನ್ನು ಕೇಳಿದ್ದೀರಿ. ಮತ್ತು ಮನವಿ ಕೊಟ್ಟಿದ್ದೀರಿ. ನಾನು ಮುಖ್ಯಮಂತ್ರಿಗಳನ್ನು ಕೇಳಿದ್ದೇನೆ, ಸೌಲಭ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರಾಮಲಿಂಗರೆಡ್ಡಿ : ಹಾಲಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಶಾಲಾ ಮಕ್ಕಳಿಗೆ ಅನಾನುಕೂಲವಾಗಿದೆ. ಅದರಲ್ಲೂ ಹೊರವಲಯಗಳಲ್ಲಿ ತೊಂದರೆಯಾಗುತ್ತಿದೆ.

ಉಪಾಧ್ಯಕ್ಷರು : ಕನ್ಸಿಡರ್ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಚಿಲ್ಲರೆ ಸೀಮೆ ಎಣ್ಣೆ ಮಾರಾಟಗಾರದಿಂದ ಸೀಮೆಎಣ್ಣೆಯ ಕದಿಮೆ ಆಳತೆ

15 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?